ಕರ್ನಾಟಕ ಸರಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 05-02-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | "ರಾಷ್ಟ್ರೀಯ ವಿಪತ್ತು ಕಡಿತ ದಿನಾಚರಣೆ ಮತ್ತು ರ್‍ಯಾಲಿ" ಗೃಹರಕ್ಷಕ, ಪೌರರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯದ ವತಿಯಿಂದ<br><br>ಮುಖ್ಯ ಅತಿಥಿ:<br><br>ಶ್ರೀ ವಜುಬಾಯಿ ವಾಲ<br>ರಾಜ್ಯಪಾಲರು,<br>ಕರ್ನಾಟಕ ಸರ್ಕಾರ<br><br>ಗೌರವ ಅತಿಥಿ:<br><br>ಶ್ರೀ ಕೆ. ಜೆ. ಜಾರ್ಜ್,<br>ಗೃಹ ಸಚಿವರು | 06-02-2015<br>ಶುಕ್ರವಾರ<br>ಬೆಳಗ್ಗೆ<br>10-30 ಗಂಟೆಗೆ | ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣ,<br>ಕಸ್ತೂರಬಾ ರಸ್ತೆ,<br>ಬೆಂಗಳೂರು |
| 2. | ಎನ್.ಎಸ್.ಎಸ್. ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ.<br><br>ಪ್ರಶಸ್ತಿ ಪ್ರದಾನ:<br><br>ಶ್ರೀ ವಜುಭಾಯಿ ವಾಲಾ,<br>ರಾಜ್ಯಪಾಲರು,<br>ಕರ್ನಾಟಕ ಸರ್ಕಾರ<br><br>ರಾಜ್ಯ ಪ್ರಶಸ್ತಿ ವಿಜೇತರ | 06-02-2015<br>ಶುಕ್ರವಾರ<br>ಬೆಳಗ್ಗೆ<br>11-30 ಗಂಟೆಗೆ | ಬ್ಯಾಂಕ್ವೆಟ್ ಸಭಾಂಗಣ,<br>ರಾಜಭವನ, ಬೆಂಗಳೂರು |

| | | | |
|---|---|---|---|
| | **<u>ಕೈಪಿಡಿ ಬಿಡುಗಡೆ</u>:**<br><br>ಶ್ರೀ ಅಭಯಚಂದ್ರ ಜೈನ್, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. | | |
| 3. | ರೈಟ್ ಸಹೋದರರ ವಿಮಾನ ಅನುಕರಣೆ ವ್ಯವಸ್ಥೆ ಮತ್ತು ವಿಜ್ಞಾನ ಪ್ರಾತ್ಯಕ್ಷಿಕ ಕೋಣೆಯ ಉದ್ಘಾಟನಾ ಸಮಾರಂಭ ಕುರಿತಂತೆ ಪತ್ರಿಕಾಗೋಷ್ಠಿ. | 06-02-2015<br>ಶುಕ್ರವಾರ<br>ಮಧ್ಯಾಹ್ನ<br>3-00 ಗಂಟೆಗೆ | ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಅಂಚೆ ಪೆಟ್ಟಿಗೆ 5216, ಕಸ್ತೂರಬಾ ರಸ್ತೆ, ಬೆಂಗಳೂರು – 560 01 |

ನಿರ್ದೇಶಕರ ಪರವಾಗಿ

## <u>ಪತ್ರಿಕಾ ಪ್ರಕಟಣೆ</u>

# <u>ಡಾ. ವಾಸುದೇವ್ ಕೆ. ಅತ್ರೆಯವರಿಗೆ</u>
# <u>ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಶಸ್ತಿ</u>

ಬೆಂಗಳೂರು, ಫೆಬ್ರವರಿ 5 (ಕರ್ನಾಟಕ ವಾರ್ತೆ)

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ 2014 ರ ಜೀವಮಾನ ಸಾಧನೆ ಪ್ರಶಸ್ತಿಯನ್ನು ಖ್ಯಾತ ವಿಜ್ಞಾನಿ ಪದ್ಮಭೂಷಣ ಡಾ. ವಾಸುದೇವ್ ಕೆ. ಅತ್ರೆ, ರಕ್ಷಣಾ ಸಚಿವರ ನಿವೃತ್ತ ವೈಜ್ಞಾನಿಕ ಸಲಹೆಗಾರರು ಹಾಗೂ ಭಾರತ ಸರ್ಕಾರದ ರಕ್ಷಣಾ ಸಂಶೋದನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿವೃತ್ತ ಮಹಾನಿರ್ದೇಶಕರು ಇವರಿಗೆ ಫೆಬ್ರವರಿ 5 ರಂದು ಆಕ್ಸಫರ್ಡ್ ವಿಜ್ಞಾನ ಕಾಲೇಜು, ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಆಯೋಜಿಸಿರುವ ಅಕಾಡೆಮಿಯ ಏಳನೇ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.

ಪ್ರಶಸ್ತಿಯು ಸ್ವರ್ಣ ಪದಕ, ಸನ್ಮಾನ ಪತ್ರ ಹಾಗೂ ಐವತ್ತು ಸಾವಿರ ರೂ. ನಗದನ್ನು ಒಳಗೊಂಡಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಪಹೊ:ಜಿಪಿಆರ್.

# <u>“ಲೈಫ್ ಆಂಡ್ ಡೆತ್ ಆಫ್ ಎ ಸ್ಟಾರ್”</u>

**ಬೆಂಗಳೂರು, ಫೆಬ್ರವರಿ ೫ (ಕರ್ನಾಟಕ ವಾರ್ತೆ)**

**ನಗರದ ಜವಾಹರ್‌ಲಾಲ್ ನೆಹರು ತಾರಾಲಯವು, ಶ್ರೀ ಟಿ. ಚೌಡಯ್ಯ ರಸ್ತೆ, ಹೈ ಗ್ರೌಂಡ್ಸ್, ಬೆಂಗಳೂರು – 560 001 ರಲ್ಲಿ ಫೆಬ್ರವರಿ 8 ರಂದು ಸಂಜೆ 6–00 ಗಂಟೆಗೆ "ಲೈಫ್ ಆಂಡ್ ಡೆತ್ ಆಫ್ ಎ ಸ್ಟಾರ್" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.**

**ಹತ್ತು ವರ್ಷ ಹಾಗೂ ಮೇಲ್ಪಟ್ಟವರಿಗೆ ಪ್ರಥಮ ಆದ್ಯತೆಯಿದ್ದು, ಈ ಕಾರ್ಯಕ್ರಮವು 55 ನಿಮಿಷಗಳಾಗಿದ್ದು, ಹೆಚ್ಚಿನ ವಿವರಗಳಿಗಾಗಿ ದೂರವಾಣಿ – 2237 9725 /2226 6084 ಅಥವಾ http://www.taralaya.org/monthly_movie.php ಸಂಪರ್ಕಿಸಬಹುದಾಗಿದೆ.**

**ಪಹೊ:ಜಿಪಿಆರ್.**

## ಲಾಟರಿ ಯೋಜನೆ ಇಲ್ಲ

**ಬೆಂಗಳೂರು, ಫೆಬ್ರವರಿ ೫ (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಮತ್ತೆ ಲಾಟರಿ ಯೋಜನೆಯನ್ನು ಯಾವುದೇ ಕಾರಣಕ್ಕೂ ಜಾರಿಗೆ ತರುವುದಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಿಳಿಸಿದರು.

ಗುರುವಾರ ವಿಧಾನ ಪರಿಷತ್ತಿನಲ್ಲಿ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಅವರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಯವರು ಈ ಸಂಬಂಧ ರಾಜ್ಯ ಯೋಜನಾ ಮಂಡಳಿಯಿಂದ ಯಾವುದೇ ಪ್ರಸ್ತಾಪ ಬಂದಿಲ್ಲ ಎಂದರು.

ಲಾಟರಿ ಯೋಜನೆಯಿಂದ ಬರುವ ಹಣವನ್ನು ರಾಜ್ಯದಲ್ಲಿ ಆರೋಗ್ಯ ಕಾಯಕ್ರಮಕ್ಕೆ ಬಳಸಿಕೊಳ್ಳುವಂತ ಸ್ಥಿತಿ ಸರ್ಕಾರಕ್ಕೆ ಬಂದಿಲ್ಲ ಎಂದ ಮುಖ್ಯಮಂತ್ರಿ ಅವರು ಜನರ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರಕ್ಕೆ ಹಣಕಾಸಿನ ಸಮಸ್ಯೆ ಇಲ್ಲದಿರುವುದರಿಂದ ಯಾವುದೇ ಕಾರಣಕ್ಕೂ ಮತ್ತೊಮ್ಮೆ ಲಾಟರಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತರುವುದಿಲ್ಲ ಎಂದರು.

ಬಾಬು/ಕೆಪಿಪಿ/ಕೆಎಂ

## ರಾಜ್ಯದ ಯೂವುದೇ ಕೈಗಾರಿಕೆಗಳು ನೆರೆ ರಾಜ್ಯಕ್ಕೆ ಹೋಗುತ್ತಿಲ್ಲ

**ಬೆಂಗಳೂರು, ಫೆಬ್ರವರಿ ೫ (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಸ್ಥಾಪನೆ  ಆಗಬೇಕಾಗಿರುವ ಯಾವುದೇ ಕೈಗಾರಿಕೆಗಳು ರಾಜ್ಯ ಬಿಟ್ಟು ನೆರೆ ರಾಜ್ಯಗಳಿಗೆ ಹೋಗುತ್ತಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಿಳಿಸಿದರು.

ಗುರುವಾರ ವಿಧಾನ ಪರಿಷತ್ತಿನ  ಸದಸ್ಯ ಶ್ರೀ ಕಮಟಗಿಮಠ ಮಹಂತೇಶ ಮಲ್ಲಿಕಾರ್ಜುನ ಅವರ ಪರವಾಗಿ ಶ್ರೀ ಅರುಣ್ ಶಹಪೂರ್ ಅವರು  ಪ್ರಶ್ನೋತ್ತರ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಅವರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಎರಡು ವರ್ಷದ ಅವಧಿಯಲ್ಲಿ 356 ಕಂಪನಿಗಳು ಮುಂದೆ ಬಂದಿವೆ.  ಏಕಗವಾಕ್ಷಿ  ಯೋಜನೆಯಡಿ 124 ಕಂಪನಿಗಳು ಸ್ವೀಕೃತಿಗೊಂಡಿದೆ. ಹಿರೋ ಮೋಟಾರ್ಸ್ ಕಂಪನಿ ಮಾತ್ರ ರಾಜ್ಯದಿಂದ ಹೊರ ಹೋಗಿದೆ ಅದನ್ನು ಬಿಟ್ಟು ಇನ್ನಾವುದೇ ಕೈಗಾರಿಕೆಗಳು ನೆರೆರಾಜ್ಯಗಳಿಗೆ ಹೋಗಿಲ್ಲ ಎಂದರು.

ಪ್ರತಿಷ್ಠಿತ ಏಷಿಯನ್ ಪೇಯಿಂಟ್ ಘಟಕವೂ ರಾಜ್ಯದಲ್ಲಿ ಮುಂದುವರಿದಿದೆ ಎಂದ ಮುಖ್ಯಮಂತ್ರಿ ಅವರು ಹೊರ ರಾಜ್ಯಗಳ 33  ಫಾರ್ಮಸ್ಯೂಟಿಕಲ್ ಕಂಪನಿಗಳು  ರಾಜ್ಯದಲ್ಲಿ ತಮ್ಮ ಘಟಕಗಳನ್ನು ಪ್ರಾರಂಭಿಸಲು ಮುಂದೆ ಬಂದಿವೆ ಎಂದರು.  ಇದಕ್ಕಾಗಿ ಸುಮಾರು 3300 ಎಕರೆ ಭೂಮಿ ನೀಡಲು ಸರ್ಕಾರ ಕ್ರಮಕೈಗೊಂಡಿದೆ ಎಂದರು.

ಬಾಬು/ಕೆಪಿಪಿ/ಕೆಎಂ

## “ಕನ್ನಡ ಮಾಧ್ಯಮ ಪ್ರಶಸ್ತಿ” ಪ್ರದಾನ ಸಮಾರಂಭ

**ಬೆಂಗಳೂರು, ಫೆಬ್ರವರಿ ೫ (ಕರ್ನಾಟಕ ವಾರ್ತೆ)**

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ವಿಭಾಗದಲ್ಲಿ  ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕಗಳಿಸಿದ  ವಿದ್ಯಾರ್ಥಿಗಳಿಗೆ ಫೆಬ್ರವರಿ 7 ರಂದು ಬೆಳಿಗ್ಗೆ 10-30 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ  ಪ್ರಶಸ್ತಿ ಪ್ರದಾನ ಮಾಡಲಿದೆ.  ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ  ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ.  ಮುಖ್ಯ ಅತಿಥಿಗಳಾಗಿ ಸಾರಿಗೆ ಸಚಿವ ಶ್ರೀ ರಾಮಲಿಂಗಾರೆಡ್ಡಿ ಅವರು ಭಾಗವಹಿಸಲಿದ್ದಾರೆ.

ಇದೇ ರೀತಿ ಕನ್ನಡ ಮಾಧ್ಯಮ ಪ್ರಶಸ್ತಿಯನ್ನು ರಾಜ್ಯದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಎಸ್.ಎಸ್.ಎಲ್.ಸಿ. ಯ 684 ವಿದ್ಯಾರ್ಥಿಗಳು ಮತ್ತು ಪಿ.ಯು.ಸಿ.ಯ ಅ 565 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1249 ವಿದ್ಯಾರ್ಥಿಗಳನ್ನು ಗೌರವಿಸಿ ಪುರಸ್ಕರಿಸಲಾಗುತ್ತಿದೆ.  ಬೆಂಗಳೂರು ವಿಭಾಗದ ಪ್ರತೀ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳಂತೆ ಎಸ್.ಎಸ್.ಎಲ್.ಸಿ. ಯ 193 ಹಾಗೂ ಪಿ.ಯು.ಸಿ.ಯ 196 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 357 ವಿದ್ಯಾರ್ಥಿಗಳನ್ನು ಗೌರವಿಸಿ ಸನ್ಮಾನಿಸಲಾಗುವುದು.

ಈ ಪುರಸ್ಕಾರವು ಪ್ರಥಮ ನಗದುಬಹುಮಾನ 8,000/- ದ್ವಿತೀಯ ಬಹುಮಾನ 7,000/- ತೃತೀಯ ಬಹುಮಾನ 6,000/- ಗಳಲ್ಲದೆ ಸ್ಮರಣಿಕೆ, ಪ್ರಮಾಣ ಪತ್ರ, ಕೈಗಡಿಯಾರ, ಶಾಲಾ ಬ್ಯಾಗು, ಕನ್ನಡ-ಕನ್ನಡ ನಿಘಂಟು, ಕನ್ನಡ-ಇಂಗ್ಲಿಷ್  ನಿಘಂಟು ಹಾಗೂ ಪೆನ್‌ಸೆಟ್‌ನ್ನು ಒಳಗೊಂಡಿರುತ್ತದೆ.

ಪಹೊ/ಬಾಬು/ಕೆಎಂ

# ಕರ್ನಾಟಕ ರಾಜ್ಯ ಮೇಲ್ಮನವಿ ಪ್ರಾಧಿಕಾರ ಪುನರ್‌ರಚನೆ

**ಬೆಂಗಳೂರು, ಫೆಬ್ರವರಿ ೫ (ಕರ್ನಾಟಕ ವಾರ್ತೆ)**

ಜಲಮಾಲಿನ್ಯ ನಿಯಂತ್ರಣ ಹಾಗೂ ತಡೆ ಕಾಯ್ದೆ 1974 ಹಾಗೂ ವಾಯೂ ಮಾಲಿನ್ಯ ನಿಯಂತ್ರಣ ಹಾಗೂ ತಡೆ ಕಾಯ್ದೆ 1981 ರ ಅನ್ವಯ ಸರ್ಕಾರವು ಕರ್ನಾಟಕ ರಾಜ್ಯ ಮೇಲ್ಮನವಿ ಪ್ರಾಧಿಕಾರವನ್ನು ಪುನರ್‌ರಚಿಸಿದೆ.

ರಾಜ್ಯ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾಗಿದ್ದ ನ್ಯಾ: ಅಜೀತ್ ಜೆ ಗುಂಜಾಲ್ ಅವರನ್ನು ಅಧ್ಯಕ್ಷರನ್ನಾಗಿ ಹಾಗೂ ಶ್ರೀ ಎಂ.ವಿ. ಶೇಷನ್ ಅವರನ್ನು ಸದಸ್ಯರನ್ನಾಗಿ ಮುಂದುವರೆಸಿ ಅರಣ್ಯ ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆ ಆದೇಶ ಹೊರಡಿಸಿದೆ.

## Justice Ajit. J. Gunjal is the new Chairman of Karnataka State Appellate Authority

Bangalore, February 5 (Karnataka Information):

The Government of Karnataka has re-constitute the Karnataka State Appellate Authority for Forest, Environment and Ecology Department with the following Members with immediate effect. Justice Ajit. J. Gunjal, Former Judge, High Court of Karnataka, as Chairman and Sri M.V. Sheshan, as Member.

Justice Ajit J. Gunjal will hold the office as Chairman, Karnataka State Appellate Authority till he attains the age of 70 years or 3 years from assuming the charge, whichever is earlier. Sri M.V. Sheshan will continue as Member, Karnataka State Appellate Authority till he attains the age of 65 years or 3 years from assuming the charge, whichever is earlier.

ph/km